ಅನುಬಂಧ-ಬಿ

ಡಿ. ಪಿ. ಎ. ಪಿ. ಕೇಂದ್ರ ವಲಯ ಯೋಜನೆಯಲ್ಲಿ ಬಾಕಿ ಉಳಿದಿರುವ ಕೆಲಸಗಳ ವಿವರ

ಕ್ರಮ ಸಂಖ್ಯೆ	ಕೆಲಸದ ವಿವರ	ಪೂರ್ತಿಗೊಳ್ಳುವ ವರ್ಷ	ಒಂದು ವೇಳೆ ಪೂರ್ತಿಗೊಂಡರೆ ನೀರಾವರಿ ಯಾಗುವ ಕ್ಷೇತ್ರ
೧	ಗೋಕಾಕ ತಾಲ್ಲೂಕಿನ ಹುಣಶ್ಯಾಳ ಬ್ಯಾರೇಜ್	೧೯೮೯-೯೦	೨೫೦ ಹೆ.
೨	ಗೋಕಾಕ ತಾಲ್ಲೂಕಿನ ಚಿಕದೊಳ್ಳಿ ಬ್ಯಾರೇಜ್	೧೯೮೯-೯೦	೩೬೦ ಹೆ.
೩	ಗೋಕಾಕ ತಾಲ್ಲೂಕಿನ ಬೈರನಟ್ಟಿ ಏತ ನೀರಾವರಿ ಯೋಜನೆ	೧೯೯೦-೯೧	೫೪೩ ಹೆ.
೪	ಆಥಣಿ ತಾಲ್ಲೂಕಿನ ಹಲ್ಯಾಳ ಗ್ರಾಮದ ಹರಿಜನ ಗಿರಿಜನ ಸಾಮೂಹಿಕ ನೀರಾವರಿ ಯೋಜನೆ	೧೯೮೮-೮೯	೨೦ ಹೆ.
೫	ಸವದತ್ತಿ ತಾಲ್ಲೂಕಿನ ಕುರುಬಗಟ್ಟಿ ಬಸಿನೀರಿನ ಕೆರೆಯ ನಿರ್ಮಾಣ	೧೯೮೯-೯೦	೨೦ ಹೆ.
೬	ಅಕ್ಕಿ ಸಾಗರ ಬಸಿನೀರಿನ ಕೆರೆಯ ನಿರ್ಮಾಣ	೧೯೮೯-೯೦	೨೦ ಹೆ.
೭	ಗೋಕಾಕ ತಾಲ್ಲೂಕಿನ ಮಕ್ಕಳಗೇರಿ ಶಾಲ ಬಂಡಿಂಗ	೧೯೮೯-೯೦	೨೦ ಹೆ.
೮	ಗೋಕಾಕ ತಾಲ್ಲೂಕಿನ ಪುಡಕಲಕಟ್ಟಿ ಬಸಿನೀರಿನ ಕೆರೆ	೧೯೮೯-೯೦	೨೦ ಹೆ.

ಹೊಸ ತಿಪ್ಪಸಂದ್ರ ಗ್ರಾಮ ಹೆಚ್.ಎಎಲ್ ಸಿನೇ ಹಂತದಲ್ಲಿ ಒಳಚರಂಡಿ ಕಾರ್ಯವನ್ನು ಅರ್ಧಕ್ಕೆ ನಿಲ್ಲಿಸಿರುವ ಬಗ್ಗೆ

೫೪೧. ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೆಚ್.ಎ.ಎಲ್. ಮೂರನೇ ಹಂತದಲ್ಲಿರುವ ಹೊಸ ತಿಪ್ಪಸಂದ್ರ ಗ್ರಾಮದಲ್ಲಿ ಒಳಚರಂಡಿ ಯೋಜನೆಯ ಕಾರ್ಯ ಅರ್ಧಕ್ಕೆ ನಿಂತಿರುವುದಕ್ಕೆ ಕಾರಣವೇನು ?

ಆ) ಈ ಕೆಲಸವನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗಿತ್ತದೆ ?

ಇ) ಬಾಕಿ ಉಳಿದಿರುವ ಕೆಲಸಕ್ಕೆ ಹಣವನ್ನು ಬಿಡುಗಡೆ ಮಾಡಿ ಜಾಗ್ರತೆ ಈ ಕೆಲಸವನ್ನು ಪೂರ್ಣ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಈ ಪ್ರದೇಶದಲ್ಲಿರುವ ಸಿನಿಮಾ ಮಂದಿರದ ಬಳಿ ಭೂವಿವಾದ ಇದ್ದುದರಿಂದ ಕೆಲಸವನ್ನು ಪೂರ್ತಿಗೊಳಿಸಲು ಆಗಲಿಲ್ಲ.

ಆ) ರೂ. ೨.೪೬,೩೦೪.೦೦.

ಇ) ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಮಹಾನಗರಸಭೆಗೆ ಹಣಕಾಸಿನ ವಿತರಣೆ ಕುರಿತು

೬೧೬. ಶ್ರೀ ಪಿ.ಸಿ. ಸಿದ್ದನಗೌಡ(ಕಲಘಟಗಿ) ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಮಹಾನಗರಸಭೆಗೆ ಇರುವಷ್ಟು ನಾಗರೀಕ ಸೌಲಭ್ಯಗಳು ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಗೆ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?